ಸಾಹಿತಿ, ಕಲಾವಿದರು ಮುಂತಾದವರಿಗೆ ಕೊಡುವ ಗೌರವ ಧನ

೬೪೫ (೪೭೪) ಶ್ರೀ ಎನ್. ಹೆಚ್. ಗೌಡ (ಕುಮಟಾ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸಾಹಿತಿಗಳು, ಕಲಾವಿದರು ಮುಂತಾದವರಿಗೆ ಕೊಡುವ ಮಾಸಿಕ ಗೌರವಧನವನ್ನು ಸರ್ಕಾರ ನಿಲ್ಲಿಸಿದೆಯೇ ?

ಆ) ಹಾಗಿದ್ದಲ್ಲಿ ಗೌರವಧನ ನಿಲ್ಲಿಸಲು ಕಾರಣವೇನು ?

ಇ) ಅದನ್ನು ಮತ್ತೆ ನೀಡಲು ಸರ್ಕಾರ ಯೋಚಿಸುತ್ತಿದೆಯೇ ?

ಈ) ಹಾಗಿದ್ದಲ್ಲಿ ಯಾವಾಗಿನಿಂದ ನೀಡಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಬಿಜಾಪುರ ನಗರಕ್ಕೆ ಕುಡಿಯುವ ನೀರಿನ ಬೃಹತ್ ಯೋಜನೆ

(೭೬೯) ೪೭೫ ಶ್ರೀ ಬಾಬುರೆಡ್ಡಿ ತುಂಗಳ್ (ಬಿಳಗಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಳೆಯುತ್ತಿರುವ ವಿಜಾಪುರ ನಗರಕ್ಕೆ ಬೃಹತ್ ಪ್ರಮಾಣದ ಕುಡಿಯುವ ನೀರಿನ ಯೋಜನೆಗೆ ಸರ್ಕಾರವು ಆಡಳಿತಾತ್ಮಕ ಮಂಜೂರಿ ನೀಡಿದೆಯೇ ?

ಆ) ಹಾಗಿದ್ದಲ್ಲಿ ಅದರ ಸಧ್ಯದ ಅಂದಾಜು ವೆಚ್ಚವೆಷ್ಟು ?

ಇ) ಈ ಯೋಜನೆಯನ್ನು ಕಾರ್ಯಾರಂಭ ಯಾವಾಗ ಮಾಡಲಾಗುವುದು ?

ಈ) ಅದು ಪೂರ್ತಿಗೊಂಡಾಗ ವಿಜಾಪುರದ ಪ್ರತಿ ವ್ಯಕ್ತಿಗೆ ದೊರಕಬಹುದಾದ ತಲಾ ನೀರಿನ ಗ್ಯಾಲನ್ನಿನ ಪ್ರಮಾಣವೆಷ್ಟು ?

ಉ) ವಿಜಾಪುರ ನಗರದಲ್ಲಿ ನೀರು ಪೂರೈಕೆಗೆ ತಾತ್ಕಾಲಿಕವಾಗಿ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—

ಅ) ಈ ಯೋಜನೆಯು ಸರಕಾರದ ಪರಿಶೀಲನೆಯಲ್ಲಿದೆ.

ಆ) ೧೬.೭೦ ಕೋಟಿ ರೂಪಾಯಿಗಳು.

ಇ) ಈ ಯೋಜನೆಯ ಆರ್ಥಿಕ ಹಂಚಿಕೆಯ ನಮೂನೆಯನ್ನು ನಿರ್ಧರಿಸಿ ಸರ್ಕಾರವು ಆಡಳಿತ ಅನುಮೋದನೆಯನ್ನು ನೀಡಿದ ನಂತರ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.

ಈ) ಪ್ರತಿಯೊಬ್ಬರಿಗೆ ದಿನಂ ಪ್ರತಿ ತಲಾ ೧೩೫ ಲೀಟರ್ ಸರಬರಾಜು ಮಾಡಲು ವಿನ್ಯಾಸ ಗೊಳಿಸಲಾಗಿದೆ.

ಉ) ಪ್ರಸ್ತುತವಾಗಿ ವಿಜಾಪುರ ನಗರಕ್ಕೆ ಭೂತನಾಳ ಕೆರೆಯಿಂದ ಕೃಷ್ಣಾ ನದಿಯಿಂದ ಮತ್ತು ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.